ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ನಾಗಪ್ಪ ದಿಂಡಲಕೊಪ್ಪ | ಪಿಡಬ್ಲ್ಯೂ | : | 21 |
| ತಂದೆಯ ಹೆಸರು | : ಗಂಗಪ್ಪ | ಸಿಡಬ್ಲ್ಯೂ | : | 49 |
| ವಯಸ್ಸು | : 70 ವರ್ಷ | | | |
| ಉದ್ಯೋಗ | : ನಿವೃತ್ತ ನೌಕರ | | | |
| ವಾಸ ಸ್ಥಳ | : ಧಾರವಾಡ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕ: 21/06/2019
ಮುಖ್ಯ ವಿಚಾರಣೆ ಎಪಿಪಿ ಯವರಿಂದ :

ನಾನು ಕಳೆದ 20 ವರ್ಷಗಳಿಂದ ಧಾರವಾಡದಲ್ಲಿ ವಾಸ ಇದ್ದೇನೆ. 2000 ನೇ ಸಾಲಿನಲ್ಲಿ ಶಾಂತಿನಿಕೇತನ ನಗರ ಧಾರವಾಡದಲ್ಲಿ ವಾಸ ಇದ್ದೇನು. ಅಲ್ಲಿ ಸಾರ್ವಜನಿಕ ರಸ್ತೆಗಳು ಸರಿಯಾಗಿ ಇರಲಿಲ್ಲ. ಆ ಸಂಪೂರ್ಣ ಲೇಔಟ್ ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿರಲಿಲ್ಲ ಆದ್ದರಿಂದ ಆ ಬಡಾವಣೆಯ ರಸ್ತೆಯ ಕೆಲಸಗಳನ್ನು ಮೊದಲು ಸೊಸೈಟಿಯವರು ಮಾಡಿದ್ದರು ಆ ನಂತರ ಯಾರು ಮಾಡಬೇಕಾಗಿತ್ತು ಎಂಬುವುದು ನನಗೆ ಗೊತ್ತಿಲ್ಲ. ಚಾಸಾ 45 ಜಗದೀಶ ಸಾಲಿಮಠ ರವರು ನನಗೆ ಪರಿಚಯಸ್ಥರು ಅವರು ಈಗ ಮಾನಸಿಕವಾಗಿ ಹುಷಾರಿಲ್ಲ ಹಾಗೂ ಚಾಸಾ 46 ರವರು ಪರಿಚಯ ಇದೆ ಹಾಗೂ ಅವರಿಗೆ ಪಾರ್ಶ್ವವಾಯ ಆಗಿರುತ್ತದೆ. ಚಾಸಾ 47 ಮತ್ತು 48 ರವರು ಪರಿಚಯ ಇದ್ದು ಅವರು ಈಗ ತೀರಿಕೊಂಡಿರುತ್ತಾರೆ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದ :

ದಿ.01.09.2000 ಪ್ರಜಾವಾಣಿ ದಿನಪತ್ರಿಕೆಯನ್ನು ಓದಿದಾಗ ಆರೋಪಿತರು ನಮ್ಮ ಬಡಾವಣೆಯಲ್ಲಿ ಇರುವ ಸಾರ್ವಜನಿಕ ರಸ್ತೆ ರಿಪೇರಿ ಹಾಗೂ ವಗೈರೆ ಕೆಲಸದ ಬಗ್ಗೆ ಸುಮಾರು 22 ಲಕ್ಷ ರೂಪಾಯಿ ಹಣವನ್ನು ದುರುಪಯೋಗ ಮಾಡಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರು ನನ್ನನ್ನು ದಿ.17.10.2000 ರಂದು

ವಿಚಾರಿಸಿ ಹೇಳಿಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಈಗ ಓದಿ ಹೇಳಿದ ಹೇಳಿಕೆಯನ್ನು ನಿಪಿ.17 ಎಂದು ಗುರುತಿಸಲಾಯಿತು. ಆ ರೀತಿ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿಗಳ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.